ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು–560 056

ಸಂಖ್ಯೆ. ಎಸಿಎ–2/ವಿ.ವಿ.ಪ.ವಿ.ಸಭೆ/2021–22 ದಿನಾಂಕ: 18/10/2021

ಗೆ.

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು–56.

ಮಾನ್ಯರೆ,

ವಿಷಯ: ದಿನಾಂಕ:11/10/2021ರಂದು ಆನ್–ಲೈನ್ ತಂತ್ರಾಂಶದ ಮೂಲಕ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

*****

ದಿನಾಂಕ:11/10/2021ರಂದು **ಆನ್–ಲೈನ್ ತಂತ್ರಾಂಶದ ಮೂಲಕ ಜರುಗಿದ** ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.18ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ಆದೇಶಾನುಸಾರ

K Jyothi 18/10/2021
ಕುಲಸಚಿವರು.

**ಪ್ರತಿಗಳು:**

1. ಪ್ರಧಾನ ಕಾರ್ಯದರ್ಶಿಯವರು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು – 01.
2. ಅಪರ ಮುಖ್ಯ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 01.
3. ಕುಲಪತಿಯವರು/ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಯವರು – ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಎಸಿಎ-2/ಎ2/ವಿ.ವಿ.ಪ.ಸಾ.ಸ/2021-22 ದಿನಾಂಕ: 12-10-2021

ದಿನಾಂಕ: 11.10.2021ರಂದು ಆನ್-ಲೈನ್ ತಂತ್ರಾಂಶದ ಮೂಲಕ ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಡಾವಳಿಗಳು:

<u>ಹಾಜರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ವೇಣುಗೋಪಾಲ್. ಕೆ. ಆರ್. ಕುಲಪತಿಗಳು, ಬೆಂ.ವಿ.ಬೆಂ. | ಅಧ್ಯಕ್ಷರು |
| 2. | ಡಾ. ವತ್ಸಲ. ಎನ್. ಪ್ರಾಂಶುಪಾಲರು | ಸದಸ್ಯರು |
| 3. | ಶ್ರೀ ಕುಮಾರ ಟಿ, ಪ್ರಾಂಶುಪಾಲರು | ಸದಸ್ಯರು |
| 4. | ಶ್ರೀಮತಿ ಪದ್ಮ.ವಿ, ಪ್ರಾಂಶುಪಾಲರು | ಸದಸ್ಯರು |
| 5. | ಡಾ. ಧನಂಜಯ ಬಿ.ಆರ್. ಪ್ರಾಂಶುಪಾಲರು | ಸದಸ್ಯರು |
| 6. | ಡಾ. ಎಂ. ಶೈಲಜ, ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಸುಧೀರ್ ಪೈ. ಕೆ.ಎಲ್. ಪ್ರಾಂಶುಪಾಲರು | ಸದಸ್ಯರು |
| 8. | ಶ್ರೀಮತಿ ರೇಖಾ. ಡಿ.ಜಿ, ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ. ಹರೀಶ್ ನಾಯ್ಕ್, ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಎ.ಎನ್. ವೆಂಕಟೇಶ, | ಸದಸ್ಯರು |
| 11. | ಶ್ರೀ ಕೆ. ರವಿ | ಸದಸ್ಯರು |
| 12. | ಶ್ರೀ ದೊಡ್ಡೇಗೌಡ, ಬಿನ್ ನರಸೇಗೌಡ | ಸದಸ್ಯರು |
| 13. | ಡಾ. ರಾಮಕೃಷ್ಣ ದಾಮ್ಲೆ, ಪ್ರಾಧ್ಯಾಪಕರು | ಸದಸ್ಯರು |
| 14. | ಡಾ. ನ್ಯೂರ್ ಶಹೀನಾ ಬೇಗಂ, ಪ್ರಾಧ್ಯಾಪಕರು | ಸದಸ್ಯರು |
| 15. | ಪ್ರೊ: ಸಿ. ನಾಗಭೂಷಣ, ಪ್ರಾಧ್ಯಾಪಕರು | ಸದಸ್ಯರು |
| 16. | ಪ್ರೊ. ಜಯಕುಮಾರ್. ಜಿ. ರೆಡ್ಡಿ, ಡೀನರು, ಕಲಾ ನಿಕಾಯ | ಸದಸ್ಯರು |
| 17. | ಡಾ. ವಿ.ವಿ. ಸುರೇಶ್ ಬಾಬು, ಡೀನರು, ವಿಜ್ಞಾನ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 18. | ಡಾ. ಸಿಂಥಿಯ ಮೆನೆಜಸ್, ಡೀನರು, ವಾಣಿಜ್ಯ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 19. | ಡಾ. ಪಿ. ದೀಪಾ ಶೆಣೈ, ಡೀನರು, ತಾಂತ್ರಿಕ ನಿಕಾಯ, ಬೆಂ.ವಿ.ವಿ. | ಸದಸ್ಯರು |
| 20. | ಡಾ. ದಶರಥ ಎನ್. ಡೀನರು, ಕಾನೂನು ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 21. | ಡಾ: ತಮ್ಮಯ್ಯ ಆರ್.ಬಿ. | ಸದಸ್ಯರು |
| 22. | ಶ್ರೀಮತಿ ಕೃಪಾ | ಸದಸ್ಯರು |
| 23. | ಶ್ರೀ ಎಂ. ರಾಘವೇಂದ್ರ ಬಾಳಿಗ | ಸದಸ್ಯರು |
| 24. | ಶ್ರೀ ಜಯರಾಮ್ ವಿ.ಎಲ್. | ಸದಸ್ಯರು |
| 25. | ಗ್ರಂಥಪಾಲಕರು, ಬೆಂ.ವಿ.ಬೆಂ. | ಸದಸ್ಯರು |
| 26. | ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಬೆಂ.ವಿ.ಬೆಂ. | ಸದಸ್ಯರು |
| 27. | ಡಾ. ಜೆ.ಟಿ. ದೇವರಾಜು, ಕುಲಸಚಿವರು (ಮೌಲ್ಯಮಾಪನ), ಬೆಂ.ವಿ.ಬೆಂ. | ಸದಸ್ಯರು |
| 28. | ಶ್ರೀಮತಿ ಹೆಚ್. ಬಿ. ಪಾರ್ವತಿ. ವಿತ್ತಾಧಿಕಾರಿಗಳು, ಬೆಂ.ವಿ.ಬೆಂ. | ಸದಸ್ಯರು |
| 29. | ಶ್ರೀಮತಿ ಕೆ. ಜ್ಯೋತಿ. ಐ.ಎ.ಎಸ್., ಕುಲಸಚಿವರು, ಬೆಂ.ವಿ.ಬೆಂ. | ಸದಸ್ಯ ಕಾರ್ಯದರ್ಶಿ |

ಮಾನ್ಯ ಕುಲಪತಿಗಳು, ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿ ವಿದ್ಯಾವಿಷಯಕ ಪರಿಷತ್ತಿಗೆ ಹೊಸದಾಗಿ ನಾಮಕರಣಗೊಂಡ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ: ಸಿ.ನಾಗಭೂಷಣ ಹಾಗೂ ಕಲಾ ನಿಕಾಯದ ಡೀನರಾದ ಪ್ರೊ: ಜಯಕುಮಾರ್ ಜಿ.ರೆಡ್ಡಿ ಇವರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿದರು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ, ಕಲಾ ನಿಕಾಯದ ಡೀನರಾದ ಪ್ರೊ: ಬಿ.ಚಿಕ್ಕಮೇಲೂರಪ್ಪ, ಶಿಕ್ಷಣ ನಿಕಾಯದ ಡೀನರಾದ ಡಾ: ಹಸೀನ್ ತಾಜ್, ಅವರುಗಳ ಸೇವೆಯನ್ನು ಶ್ಲಾಘಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು:

<u>ವಿಷಯ ಸೂಚಿ: 1</u>: ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020ನ್ನು ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಪದವಿ ಸಂಯೋಜಿತ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ–

ಕುಲಪತಿಗಳು ಮಾತನಾಡಿ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020ನ್ನು 2021–22ನೇ ಶೈಕ್ಷಣಿಕ ಸಾಲಿನಿಂದಲೇ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಪದವಿ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲು ಉನ್ನತ ಶಿಕ್ಷಣ ಇಲಾಖೆಯಿಂದ ದಿನಾಂಕ 07.08.2021ರಲ್ಲಿ ಆದೇಶ ಹೊರಡಿಸಿದ್ದು, ಸದರಿ ಆದೇಶಾನುಸಾರ ನೂತನ ಪಠ್ಯಕ್ರಮಗಳನ್ನು ಈ ವರ್ಷದಿಂದಲೇ ಜಾರಿಗೊಳಿಸಬೇಕಾಗಿರುವುದರಿಂದ ಈ ವಿಶೇಷ ಶೈಕ್ಷಣಿಕ ಪರಿಷತ್ತಿನ ಆಯೋಜಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ನೂತನ ಶಿಕ್ಷಣ ನೀತಿ ಅನ್ವಯ ವಿನಿಮಯಗಳು (Regulations and Scheme of Examination), ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಅಂತಿಮಗೊಳಿಸಲಾಗುತ್ತಿದ್ದು, ಅವರಿಂದ ಸ್ವೀಕೃತವಾದ ತಕ್ಷಣ, ಚರ್ಚಿಸಿ ಅನುಮೋದನೆ ಪಡೆದುಕೊಳ್ಳಲು ಭೌತಿಕ ಸಭೆಯನ್ನು ಸಧ್ಯದಲ್ಲಿಯೇ ಆಯೋಜಿಸಲಾಗುವುದೆಂದು ಸಭೆಗೆ ತಿಳಿಸಿದರು. ಸದರಿ ಸಭೆಗೆ ಇಂಜಿನಿಯರಿಂಗ್ ಕೋರ್ಸಿನ ವಿನಿಮಯಗಳು ಮತ್ತು ಪಠ್ಯಕ್ರಮಗಳನ್ನೂ ಸಹ ಮಂಡಿಸಲಾಗುವುದೆಂದು ತಿಳಿಸಿದರು.

ಪ್ರಸ್ತುತ ನೂತನ ಶಿಕ್ಷಣ ನೀತಿಯ ಅನ್ವಯ ಪದವಿ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ವಿಷಯಗಳಿಗೂ ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ ಪಠ್ಯಕ್ರಮಗಳ ವಿನ್ಯಾಸಗಳನ್ನು (model syllabus) ವಿಶ್ವವಿದ್ಯಾಲಯಗಳಿಗೆ ಕಳುಹಿಸಿ ವಿಶ್ವವಿದ್ಯಾಲಯದ ಹಂತದಲ್ಲಿ ಅಗತ್ಯವಿರುವ ಕಡೆ ತಿದ್ದುಪಡಿಗಳನ್ನು ಮಾಡಿಕೊಂಡು ನೂತನ ಪಠ್ಯಕ್ರಮಗಳನ್ನು ಜಾರಿಗೊಳಿಸುವಂತೆ ತಿಳಿಸಿದ್ದರು. ಅದರಂತೆ ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ಸದರಿ ಪಠ್ಯಕ್ರಮಗಳನ್ನು ರವಾನಿಸಿ ಸಂಬಂಧಪಟ್ಟ ಅಧ್ಯಯನ ಮಂಡಳಿಗಳ ಮುಂದೆ ಮಂಡಿಸಿ, ಅಗತ್ಯವಿರುವ ಕಡೆ ತಿದ್ದುಪಡಿ ಮಾಡಿ ಅಂತಿಮ ಪಠ್ಯಕ್ರಮಗಳನ್ನು ಕಳುಹಿಸಿಕೊಡುವಂತೆ ಕೋರಲಾಗಿತ್ತು. ಅಧ್ಯಯನ ಮಂಡಳಿಗಳು ರಚಿಸಿ ಕಳುಹಿಸಿದ್ದ ಪಠ್ಯಕ್ರಮಗಳನ್ನು ಸಂಬಂಧಿಸಿದ ನಿಕಾಯಗಳ ಮುಂದೆ ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗಿದ್ದು ಅಂತಿಮ ಅನುಮೋದನೆಗಾಗಿ ಈ ಸಭೆಯ ಮುಂದೆ ಮಂಡಿಸಲಾಗುತ್ತಿದ್ದು ಈ ಕೆಳಕಂಡ ವಿಷಯಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಬೇಕೆಂದು ಮಾನ್ಯ ಕುಲಪತಿಗಳು ಕೋರಿದರು.

| Syllabus of the following subjects are placed before the Academic Council for approval<br>Faculty of Arts | |
|---|---|
| 1 | Kannada |
| 2 | English |
| 3 | Hindi |
| 4 | Sanskrit |
| 5 | Telugu |
| 6 | Urdu |
| 7 | Tamil and Malayalam |
| 8 | Sociology |
| 9 | History |
| 10 | Economics |
| 11 | Social Work |

| | |
|---|---|
| 12 | Women's Studies |
| 13 | Communication |
| 14 | Political Science |
| 15 | BVA-Visual Arts and BVA/BDES-Design |
| 16 | Performing Arts |
| | **Faculty of Commerce** |
| 1 i | BBA Regular |
| ii | BBA (Aviation Management) |
| 2 i | B.Com. Regular |
| ii | B.Com. (Insurance and Actuarial |
| iii | B.Com. (Logistics and Supply Chain Management |
| | **Faculty of Science** |
| 1 | B.Sc./B.Sc. Hons in Geology |
| 2 | B.Sc. in Genetics |
| 3 | B.Sc./B.Sc. Hons (Electronics) |
| 4 | i) B.Sc. in Psychology and<br>ii) M.Sc. in Counselling and Spiritual Health |
| 5 | B.Sc./B.Sc. Hons in Chemistry |
| 6 | B.Sc./B.Sc. Hons in Statistics |
| 7 | B.Sc./B.Sc. Hons in Library and Information Science |
| 8 | B.Sc./B.Sc.Hons in Zoology |
| 9 | i) Bachelor of Computer Application (BCA)<br>ii) Bachelor of Computer Science<br>iii) Master of Computer Science (MCA)<br>iv) Master of Science in Computer Science (M.Sc.(CS)<br>v) M.Voc Data Science |
| 10 | B.Sc./B.Sc. Hons Biochemistry |
| 11 | i) B.Sc. Environmental Science<br>ii) Ability Enhancement Compulsory Course (AECC) |
| 12 | i) B.Sc. (Basic), B.Sc. (Hons) & Integrated in Clinical Nutrition and Dietetics – Core Discipline<br>ii) B.Sc. (Basic), B.Sc. (Hons) & M.Sc. Integrated in Nutrition and Dietetics<br>iii) B.Sc. (Basic), B.Sc. (Hons)<br>iv) M.Sc. Integrated in Food Science and Nutrition Major |
| 13 | B.Sc. Biotechnology |
| 14 | B.Sc. Microbiology |
| 15 | B.Sc. in Botany |
| 16 | B.Sc. Physics |

| | |
|---|---|
| 17 | i) B.A/B.Sc. and B.Sc. Honours) in Geography<br>ii) Five year Integrated B.Sc. and M.Sc. degree program (IM.Sc.) in Geography with Specialization:<br>a) Geoinformatics<br>b) Natural Disaster Management |
| 18 | B.Sc. and B.Sc. Honours in Mathematics |
| 19 | i) B.Sc. in Fashion & Apparel Design<br>ii) B.Sc. in Interior Design and Decoration |
| 20 | B.Sc. in Multimedia |
| 21 | Biological Sciences |

ಮೇಲೆ ತಿಳಿಸಿರುವ ವಿಷಯಗಳ ಪಠ್ಯಕ್ರಮಗಳನ್ನು ಸಂಬಂಧಿಸಿದ ಡೀನರುಗಳಾದ, ಪ್ರೊ: ಜಯಕುಮಾರ್ ರೆಡ್ಡಿ, ಪ್ರೊ:ವಿ.ವಿ.ಸುರೇಶ್ ಬಾಬು, ಮತ್ತು ಸಿಂಥಿ0ಯಾ ಮೆನೆಜಸ್ ರವರುಗಳು ಅನುಕ್ರಮವಾಗಿ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಿ ವಿಷಯವಾರು ವಿವರಗಳನ್ನು ತಿಳಿಸಿ ಅನುಮೋದನೆ ನೀಡಬಹುದೆಂದು ತಿಳಿಸಿದರು.

ಸದಸ್ಯರಾದ ಡಾ: ರಾಮಕೃಷ್ಣ ದಾಮ್ಲೆರವರು ಮಾತನಾಡಿ, NCC/NSS ಹಾಗೂ ಹೆಲ್ತ್ ಕೇರ್ ವಿಷಯಗಳ ಬಗ್ಗೆ ಪಠ್ಯಕ್ರಮವಿರುವುದಿಲ್ಲ ಹಾಗೂ Model Question Paper Pattern ಗಳ ಬಗ್ಗೆ ತಿಳಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು, Multiple-Entry ಇರುವುದರಿಂದ 0ಯಾವ ರೀತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದೆಂದು ಕೇಳಿದರು. ಮಾನ್ಯ ಕುಲಪತಿಗಳು ಉತ್ತರಿಸಿ, Exit Option ಪಡೆದರೆ, ಒಂದರಿಂದ ನಾಲ್ಕನೇ ವರ್ಷದ ವರೆಗೆ ಕ್ರಮವಾಗಿ 1. Certifiate Course 2. Diploma Course 3. Degree 4. Honors Degree with Specialization ಎಂದು ಪ್ರಮಾಣ ಪತ್ರವನ್ನು ವಿತರಿಸಲಾಗುವುದೆಂದು ತಿಳಿಸಿದರು. ಹಾಗೂ ಹಾಗೂ Model Question Paper Pattern ಗಳ ಬಗ್ಗೆ0ಯೂ ಪರೀಕ್ಷಾ ಮಂಡಳಿಗಳು ಮಾರ್ಗಸೂಚಿ0ಯನ್ನು ತಿಳಿಸಲಿವೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ದೊಡ್ಡೇಗೌಡರವರು ಮಾತನಾಡಿ, ಪ್ರಸ್ತುತ ಮಂಡಿಸಿರುವ ಕಾರ್ಯಸೂಚಿಯಲ್ಲಿ ಮೊದಲ ವರ್ಷದ ಪಠ್ಯಕ್ರಮಗಳು ಮಾತ್ರ ಇರುತ್ತದೆ. ಉಳಿದ ವರ್ಷಗಳ ಪಠ್ಯಕ್ರಮಗಳು ಇರುವುದಿಲ್ಲವೆಂದು ತಿಳಿಸಿದರು. ಹಾಗೂ ಪಠ್ಯಕ್ರಮ ರಚಿಸಲು ಶ್ರಮವಹಿಸಿರುವ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು. ಮಾನ್ಯ ಕುಲಪತಿಗಳು ಉತ್ತರಿಸಿ, ಇನ್ನೂ ವಿನಿಮಯಗಳು ಸರ್ಕಾರದ ಹಂತದಲ್ಲಿ ಅಂತಿಮಗೊಳ್ಳುತ್ತಿದ್ದು, ಪ್ರಸ್ತುತ ಮೊದಲ ವರ್ಷದ 2 ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ಮಾತ್ರ ಸಿದ್ಧಪಡಿಸಲಾಗಿದ್ದು, ವಿನಿಮಯಗಳು ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಅನುಮೋದನೆಗೊಂಡ ನಂತರ ಉಳಿದೆಲ್ಲ ಸೆಮಿಸ್ಟರ್‌ಗಳ ವಿಷಯಗಳ ಬಗ್ಗೆ ಪಠ್ಯಕ್ರಮಗಳನ್ನು ರಚಿಸಲಾಗುವುದೆಂದು ಉತ್ತರಿಸಿದರು.

ಮುಂದುವರೆದು, ವಿಶ್ವವಿದ್ಯಾಲಯದ ಆವರಣದಲ್ಲೇ ಹೊಸ ನಾಲ್ಕು ವರ್ಷಗಳ B.A. Honors, B.Sc. Honors ಮತ್ತು B.Sc. Honors in Biological Science ಕೋರ್ಸುಗಳನ್ನು ಈ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ರವಿ ರವರು ಮಾತನಾಡಿ Exit Option ಇರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಕಾಲೇಜು ನಡೆಸುವುದು ಆಡಳಿತ ಮಂಡಳಿಗಳಿಗೆ ಕಷ್ಟವಾಗಬಹುದೆಂದು ತಿಳಿಸಿದರು. ಕುಲಪತಿಗಳು ಉತ್ತರಿಸಿ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡರೂ ಸಹ ಯುಜಿಸಿ ನಿಯಮಗಳನುಸಾರ ನಿಗಧಿತ ಅವಧಿಯಲ್ಲಿಯೇ ವಿದ್ಯಾರ್ಥಿಗಳು ಸಂಪೂರ್ಣ ಕೋರ್ಸನ್ನು ಮುಗಿಸಕೊಳ್ಳಬೇಕಾಗಿರುವುದರಿಂದ Exit Option ತೆಗೆದುಕೊಳ್ಳುವವರ ಸಂಖ್ಯೆ ತೀರಾ ಕಡಿಮೆ ಇರುತ್ತದೆ ಎಂದು ತಿಳಿಸಿ ಸಮಸ್ಯೆ ಉದ್ಭವಿಸುವುದಿಲ್ಲವೆಂದು ವಿವರಿಸಿದರು.

ಡಾ: ಎಂ.ಶೈಲಜರವರು ಮಾತನಾಡಿ ಪ್ರಸ್ತುತ ರೂಪಿಸಿರುವ ಪಠ್ಯಕ್ರಮದಲ್ಲಿ ಆಂತರಿಕ ಅಂಕ ಮತ್ತು ಪರೀಕ್ಷಾ ಅಂಕಗಳು 30:70 ರ ಅನುಪಾತದಲ್ಲಿ ಇದ್ದು, ಅದನ್ನು ಹೊಸ ನಿಯಮಗಳನುಸಾರ 40:60 ಅನುಪಾತಕ್ಕೆ ತಿದ್ದುಪಡಿ ಮಾಡಬೇಕಾಗಿದೆ ಎಂದು ತಿಳಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ, ಈಗ ರಚಿಸಿರುವ ಪಠ್ಯಕ್ರಮಗಳಲ್ಲಿ ಅಂಕಗಳ ಅನುಪಾತಗಳು ಸೇರಿದಂತೆ ಎಲ್ಲಾ ಲೋಪದೋಷಗಳನ್ನು ಇನ್ನೊಂದು ವಾರದಲ್ಲಿ ಸರಿಪಡಿಸುವಂತೆ ಸಂಬಂಧಿಸಿದ ಅಧ್ಯಯನ ಮಂಡಳಿಗಳಿಗೆ ಮನದಟ್ಟು ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಮುಂದುವರೆದು, **ಈ ಕೆಳಗೆ ತೋರಿಸಿರುವ ಕೆಲವೊಂದು** ವಿಷಯಗಳ ಬಗ್ಗೆ ಪಠ್ಯಕ್ರಮಗಳನ್ನು ಅಂತಿಮಗೊಳಿಸಲಾಗುತ್ತಿದ್ದು, ಪ್ರಸ್ತುತ ಮಂಡಿಸಿರುವ ಪಠ್ಯಕ್ರಮಗಳಲ್ಲಿನ ಲೋಪದೋಷಗಳನ್ನೂ ಸಹ ಇನ್ನೊಂದು ವಾರದಲ್ಲಿ ಸರಿಪಡಿಸಿ ಅವುಗಳಿಗೆ ಸಂಬಂಧಿಸಿದ ಅಧ್ಯಯನ ಮಂಡಳಿ ಮತ್ತು ನಿಕಾಯಗಳ ಅನುಮೋದನೆ ಪಡೆದುಕೊಂಡು, ಅಂತಿಮಗೊಳಿಸಿ ಅಳವಡಿಸಿಕೊಳ್ಳಲು ಅನುಮೋದನೆ ಕೋರಿ ಮಾನ್ಯ ಕುಲಪತಿಗಳು ಶೈಕ್ಷಣಿಕ ಪರಿಷತ್ತಿನ ಸಭೆಗೆ ಮನವಿ ಮಾಡಿದರು.

i) Forensic Science;
ii) Philosophy;
iii) Earth and Atmospheric Science;
iv) Hotel Management;
v) Physical Education;
vi) B.Sc. Economics
vii) B.Sc. Food Technology etc.,

<u>ನಿರ್ಣಯ:</u>

**ಸುದೀರ್ಘ ಚರ್ಚೆಯ ನಂತರ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನ್ವಯ, ಅಧ್ಯಯನ ಮಂಡಳಿಗಳು ವಿವಿಧ ವಿಷಯಗಳ ಬಗ್ಗೆ ಪಠ್ಯಕ್ರಮಗಳನ್ನು ರಚಿಸಿ, ಸಂಬಂಧಿಸಿದ ನಿಕಾಯಗಳಿಂದ ಅನುಮೋದನೆ ಪಡೆದುಕೊಂಡಿರುವ ಪಠ್ಯಕ್ರಮಗಳಲ್ಲಿರುವ ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಿಕೊಂಡು, ಸಿದ್ಧತೆಯ ಹಂತದಲ್ಲಿರುವ ಇತರೆ ವಿಷಯಗಳ ಪಠ್ಯಕ್ರಮಗಳನ್ನೂ ಸೇರಿಸಿಕೊಂಡು, ಎಲ್ಲಾ ವಿಷಯಗಳ ಅಂತಿಮ ಪಠ್ಯಕ್ರಮಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಪ್ರಸಕ್ತ 2021–22ನೇ ಶೈಕ್ಷಣಿಕ ಸಾಲಿನಿಂದಲೇ ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. ಮುಂದುವರೆದು, B.A. Honors, B.Sc. Honors ಮತ್ತು B.Sc. Honors in Biological Science ಕೋರ್ಸುಗಳನ್ನು ವಿಶ್ವವಿದ್ಯಾಲಯದಲ್ಲಿ, 2021–22ನೇ ಸಾಲಿನಿಂದ ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು ಹಾಗೂ ಈ ಕೋರ್ಸುಗಳ ಶುಲ್ಕಗಳನ್ನು ನಿಗದಿಗೊಳಿಸಲು ನಿರ್ಣಯಿಸಿತು. ಎನ್.ಇ.ಪಿ. ಆಶಯದಂತೆ ವಿದ್ಯಾರ್ಥಿಗಳಿಗೆ Online, on demand, open book examinations ಗಳನ್ನು ಜಾರಿಗೊಳಿಸಲು ನಿರ್ಣಯಿಸಿತು ಮತ್ತು ಸ್ನಾತಕ ಪದವಿ ತರಗತಿಗಳನ್ನು ದಿನಾಂಕ: 18–10–2021ರಿಂದ ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ತು ಅನುಮತಿಸಿತು.**

ವಿಷಯ ಸೂಚಿ: 2: Granting permission of 2 to 3 Attempts to BE Degree Engineering Course Students who joined during 2011-17, to complete the B.E. course as a one time measure.

ಇಂಜಿನಿಯರಿಂಗ್ ನಿಕಾಯದ ಡೀನರು ಮಂಡಿಸಿರುವ ಪರಾಮರ್ಶನ ಟಿಪ್ಪಣಿಯಲ್ಲಿ ದಿನಾಂಕ 17.03.2008ರಂದು ವಿಶ್ವವಿದ್ಯಾಲಯದಿಂದ ಹೊರಡಿಸಲಾದ ಅಧಿಸೂಚನೆಯಲ್ಲಿ ಬಿ.ಇ. ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಇಂತಿಷ್ಟೇ ಸಮಯದಲ್ಲಿ ತಮ್ಮ ಕೋರ್ಸ್‌ಗಳನ್ನು ಪೂರೈಸಬೇಕೆಂದು ಎಲ್ಲೂ ಸಹ ನಮೂದಾಗಿರುವುದಿಲ್ಲ. ಹೀಗಾಗಿ, ಕೋರ್ಸ್ ಮುಗಿಸಿ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅನುವು ಮಾಡಿಕೊಡಬೇಕೆಂದು ಡೀನರು ಕೋರಿದರು. ಅಲ್ಲದೆ, ಇನ್ನೂ ಕೆಲವು ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹಾಜರಾಗಲು ನಿರ್ದೇಶನ ನೀಡುವಂತೆ ಮಾನ್ಯ ನ್ಯಾಯಾಲಯದ ಮೊರೆ ಹೋಗಿರುವುದನ್ನೂ ಸಹ ಸಭೆಯ ಗಮನಕ್ಕೆ ತರಲಾಯಿತು.

ನಿರ್ಣಯ:

ಚರ್ಚೆಯ ನಂತರ, ವಿಶ್ವವಿದ್ಯಾಲಯವು ರಚಿಸಿರುವ ವಿನಿಮಯಗಳಲ್ಲಿ ಇಂತಿಷ್ಟೇ ವರ್ಷಗಳಲ್ಲಿ ಬಿ.ಇ. ಪದವಿಯನ್ನು ಪೂರ್ಣಗೊಳಿಸಬೇಕೆಂಬ ಸಮಯದ ಸ್ಪಷ್ಟತೆ ಇಲ್ಲದ ಕಾರಣ, 2011-2017ರ ಅವಧಿಯಲ್ಲಿ ಬಿ.ಇ. ವ್ಯಾಸಂಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು, ಎಲ್ಲಾ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಪೂರ್ಣಗೊಳಿಸಿದ್ದು, ಕೆಲವು ವಿಷಯಗಳಲ್ಲಿ ಅನುತ್ತೀರ್ಣವಾದಂತಹವರಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ, ಗರಿಷ್ಠ 3 (ಮೂರು) ಬಾರಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿ ಕೊಡಲು ವಿದ್ಯಾವಿಷಯಕ ಪರಿಷತ್ತು ನಿರ್ಣಯಿಸಿತು. ಸದರಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳು, ಶೇ.75ರಷ್ಟು ಹಾಜರಾತಿ ಮತ್ತು ಇತರೆ ಶೈಕ್ಷಣಿಕ sessional ಅಗತ್ಯತೆಯನ್ನು ಪೂರೈಸಿರಬೇಕೆಂಬ ಷರತ್ತಿಗೊಳಪಟ್ಟು ಅವರ ವ್ಯಾಸಂಗದ ಅವಧಿಯಲ್ಲಿ ಇದ್ದ ಪಠ್ಯಕ್ರಮಗಳು ಮತ್ತು ಪರೀಕ್ಷಾ ಪದ್ಧತಿಗಳನುಸಾರವಾಗಿಯೇ ಪರೀಕ್ಷೆಯನ್ನು ನಡೆಸಲೂ ಸಹ ಸೂಚಿಸಿತು.

ಇತರೆ ವಿಷಯಗಳು:

ಮಾನ್ಯ ಸದಸ್ಯರಾದ ಶ್ರೀ ದೊಡ್ಡೇಗೌಡ ರವರು ಮಾತನಾಡಿ ಎಂ.ಸಿ.ಎ. ಕೋರ್ಸ್ ಪ್ರಾರಂಭವಾಗಿ ಸುಮಾರು ಮೂರು ದಶಕಗಳೇ ಮುಗಿದಿದ್ದರೂ, ಸದರಿ ವಿಭಾಗವನ್ನು ಪರಿನಿಯಮಗಳನುಸಾರ Department of Studies ಲಿಸ್ಟ್ ನಲ್ಲಿ ಸೇರಿಸದೇ ಆ ವಿಭಾಗವು ಇನ್ನೂ ಸಹ MCA Programme ಎಂಬ ಹೆಸರಿನಲ್ಲಿಯೇ ಮುಂದುವರೆದಿದೆ. ನಂತರ ಪ್ರಾರಂಭಿಸಿದ ಅನೇಕ ಕೋರ್ಸುಗಳು Department of Studies ಆಗಿ ಮಾರ್ಪಟ್ಟಿವೆ. ಹೀಗಾಗಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿದರು. ಮಾನ್ಯ ಕುಲಪತಿಗಳು ಉತ್ತರಿಸಿ, ಸದರಿ ಕೋರ್ಸನ್ನು Department of Studies ಲಿಸ್ಟ್ ನಲ್ಲಿ ಸೇರಿಸಲು ನಿಯಮಗಳನುಸಾರ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಕೆ. ರವಿ ರವರು ಮಾತನಾಡಿ ಪ್ರಸ್ತುತ ಬಿ.ಬಿ.ಎ. ಪರೀಕ್ಷೆಗಳನ್ನು ಆಂಗ್ಲ ಮಾಧ್ಯಮದಲ್ಲಿ ಮಾತ್ರ ಬರೆಯಬೇಕಾಗಿದ್ದು ಕನ್ನಡ ಮಾಧ್ಯಮದಲ್ಲಿ ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಲಾಗಿ, ಮಾನ್ಯ ಕುಲಪತಿಗಳು, ಮುಂದಿನ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಪ್ರತ್ಯೇಕವಾಗಿ ಈ ವಿಷಯವನ್ನು ಮಂಡಿಸಿ ಅನುಮೋದನೆಯನ್ನು ಪಡೆದುಕೊಳ್ಳಲಾಗುವುದು ಎಂದು ಉತ್ತರಿಸಿದರು. ಬಿ.ಇ. ಪದವಿ, ಸ್ನಾತಕ ಪದವಿ ಸೇರಿದಂತೆ, ಎಲ್ಲಾ ಕೋರ್ಸುಗಳ ಕರಡು ರೆಗ್ಯುಲೇಷನ್‌ಗಳನ್ನು ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಗಾಗಿ by Circulation ಮುಖಾಂತರ ಕಳುಹಿಸಲಾಗುವುದು ಎಂದು ಕುಲಪತಿಗಳು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಪತಿಯವರು

W.D. 9211. 100 Copies. Nov. 2021